153ನೇಅ ನಿ-72 (102)
153ಅ-72-102

/642860/2024

# ಕರ್ನಾಟಕ ಸರ್ಕಾರ
# GOVERNMENT OF KARNATAKA

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿ
Office of the
Principal Chief Conservator of -Forests
(Head of Forest Force)

ಕರ್ನಾಟಕ ಅರಣ್ಯ ಇಲಾಖೆ

ಅರಣ್ಯ ಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru- 03
Telephone: 080 2334 6649
Email: apccfhqc@gmail.com

ಸಂಖ್ಯೆ: KFD/HOFF/A7(LCQ)/120/2024 E- 1469825
ದಿನಾಂಕ 20.07.2024

ಇವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು-01

ಮಾನ್ಯರೆ,

**ವಿಷಯ:** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್ ರವಿ ರವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆ ಸಂಖ್ಯೆ 102ಕ್ಕೆ ಉತ್ತರ ಒದಗಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು ರವರ ಪತ್ರ ಸಂಖ್ಯೆ: ಕವಿಪ:ಪ್ರಶಾ/102/153ನೇಅ/ ನಿ-72/2024 ದಿನಾಂಕ:20.07.2024.
2. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯ ಕಾರ್ಯದರ್ಶಿರವರ ಪತ್ರ ದಿನಾಂಕ:18.07.2024. (ನಿಯಮ 72ರ ಮೇರೆಗೆ ಸೂಚನೆ)
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ),ಬೆಂಗಳೂರು ರವರ ಪತ್ರ ಸಂಖ್ಯೆ: KFD/HOFF/B1(LAQ)/ 1/2024-PnR-KFD ದಿನಾಂಕ: 20.07.2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2)ರ ಪತ್ರದಲ್ಲಿ ತಿಳಿಸಿರುವಂತೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್ ರವಿ ರವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆ ಸಂಖ್ಯೆ 102ಕ್ಕೆ ಉತ್ತರವನ್ನು ಉಲ್ಲೇಖ (3)ರ ಪತ್ರದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ), ಬೆಂಗಳೂರು ರವರು ಸಲ್ಲಿಸಿದ್ದು ಅದನ್ನು ಕ್ರೋಢಿಕರಿಸಿ ಉತ್ತರ ಈ ಕೆಳಗಿನಂತಿದೆ.

**ಸೂಚನೆ:** *"ಕಳೆದ 5-6 ವರ್ಷಗಳಿಂದ ಕಲ್ಯಾಣ ಕರ್ನಾಟಕ ಮೀಸಲಾತಿ ಅಡಿಯಲ್ಲಿ ಸರ್ಕಾರದಿಂದ ಮಂಜೂರಾತಿ ಪಡೆಯದೇ ಅನೇಕ ಉಪ ವಲಯ ಅರಣ್ಯಾಧಿಕಾರಿಗಳನ್ನು, ವಲಯ ಅರಣ್ಯಾಧಿಕಾರಿ ಹುದ್ದೆಯಲ್ಲಿ ಕ.ನಾ.ಸೇ., ನಿಯಮ 32ರಲ್ಲಿ (ಸ್ವತಂತ್ರ ಪ್ರಭಾರ) ಕಾರ್ಯ ನಿರ್ವಯಿಸಲು ನಿಯೋಜಿಸಲಾಗಿರುತ್ತದೆ. ಆದರೆ ನಿಯಮ 32ರಡಿಯಲ್ಲಿ 6 ತಿಂಗಳಿಗಿಂತ ಹೆಚ್ಚಿನ ಅವಧಿಗೆ ಹುದ್ದೆಗಳನ್ನು ಸ್ವತಂತ್ರ ಪ್ರಭಾರದಲ್ಲಿಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.*

ಆದಾಗ್ಯೂ ಇವರುಗಳನ್ನು ಪ್ರಾದೇಶಿಕ, ವನ್ಯಜೀವಿ ಮತ್ತು ಅರಣ್ಯ ಸಂಚಾರಿದಳ ಇಂತಹ ಜವಾಬ್ದಾರಿಯುತ ಹುದ್ದೆಗಳಿಗೆ ನೇಮಕ ಮಾಡಲಾಗುತ್ತಿದೆ. ಇದರಿಂದದಾಗಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುವಾಗ ದಾಖಲಿಸುವ ಅರಣ್ಯ ಮೊಕ್ಕದ್ದಮೆ ಮತ್ತು ತನಿಖಾವರದಿಗಳು ಕಾನೂನಿನ ಅಡಿಯಲ್ಲಿ ಮಾನ್ಯವಾಗುವುದಿಲ್ಲ. ಇದಲ್ಲದೆ ಇಂತಹ ಪ್ರಭಾರದಲ್ಲಿನ ಅಧಿಕಾರಿಗಳ ಮೇಲೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿದ್ದರೂ ಸಹ ಆಯಾಕಟ್ಟಿನ ಜಾಗಗಳಿಗೆ ನಿಯೋಜಿಸಲಾಗಿದೆ, ಇದರಿಂದಾಗಿ ಅರಣ್ಯ ಕಾನೂನು ಅನುಷ್ಠಾನದಲ್ಲಿ ಹಿನ್ನಡೆಯಾಗುವ ಕಾರಣದಿಂದ ಕೂಡಲೇ 6 ತಿಂಗಳುಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಪ್ರಭಾರದಲ್ಲಿರುವ ಎಲ್ಲಾ ಉಪ ವಲಯ ಅರಣ್ಯಾಧಿಕಾರಿಗಳನ್ನು ಕೂಡಲೇ ಸ್ವತಂತ್ರ ಪ್ರಭಾರದ ಜವಾಬ್ದಾರಿಯಿಂದ ಬಿಡುಗಡೆಗೊಳಿಸುವ ಕುರಿತು".

**ಉತ್ತರ:**

1. ಕರ್ನಾಟಕ ನಾಗರಿಕ ಸೇವೆಗಳು ನಿಯಮಾವಳಿಯ ನಿಯಮ 32 ರಡಿ ಖಾಲಿ ಇರುವ ಹುದ್ದೆಗಳಲ್ಲಿ ಸದರಿ ವೃಂದದ ಹುದ್ದೆಗೆ ಅರ್ಹತೆ ಹೊಂದಿರುವ ಸರ್ಕಾರಿ ನೌಕರರಿಗೆ ಸ್ವತಂತ್ರ ಪ್ರಭಾರದ ಮೇಲೆ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಲಾಗಿರುತ್ತದೆ. ಅದರಂತೆ, ಅರಣ್ಯ ಇಲಾಖೆಯಲ್ಲಿಯೂ ಖಾಲಿ ಇರುವ ಹುದ್ದೆಗಳಿಗೆ (ವಲಯ ಅರಣ್ಯಾಧಿಕಾರಿ ವೃಂದವೂ ಸೇರಿದಂತೆ) ಈ ವ್ಯವಸ್ಥೆಯನ್ನು ಬಳಸಲಾಗುತ್ತಿದೆ.

2. ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ವಲಯ ಅರಣ್ಯಾಧಿಕಾರಿ ವೃಂದದಲ್ಲಿ ಒಟ್ಟು 18 ಹುದ್ದೆಗಳು (ನೇರ ನೇಮಕಾತಿ ಕೋಟದ 17 ಹುದ್ದೆಗಳನ್ನೂ ಸೇರಿದಂತೆ) ಪ್ರಸ್ತುತ ಖಾಲಿ ಇರುತ್ತವೆ.

3. ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಪ್ರಸ್ತುತ ಏಳು (7) ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ಕರ್ನಾಟಕ ನಾಗರಿಕ ಸೇವೆಗಳು ನಿಯಮಾವಳಿಯ ನಿಯಮ 32 ರಡಿ ಖಾಲಿ ಇರುವ ವಲಯ ಅರಣ್ಯಾಧಿಕಾರಿ ಹುದ್ದೆಗಳಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಸ್ವತಂತ್ರ ಪ್ರಭಾರದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

4. ರಾಜ್ಯದಲ್ಲಿ ಅರಣ್ಯ ಇಲಾಖೆಗೆ ಸಂಬಂಧಿಸಿದ ಅರಣ್ಯ ಕಾಯ್ದೆ/ನಿಯಮಗಳಲ್ಲಿ ದಾಖಲಾಗಿರುವ ಅರಣ್ಯ ಅಪರಾಧ ಪ್ರಕರಣಗಳಲ್ಲಿ ಇಲಾಖೆಯಲ್ಲಿನ ವಿವಿಧ ಹಂತದ ಅರಣ್ಯಾಧಿಕಾರಿಗಳಿಗೆ (ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ಸೇರಿದಂತೆ) ತನಿಖೆ ನಡೆಸಲು ಕರ್ನಾಟಕ ಅರಣ್ಯ ಕೈಪಿಡಿಯಲ್ಲಿ ಈಗಾಗಲೇ ಅವಕಾಶ ನೀಡಲಾಗಿರುತ್ತದೆ.

5. ಅಲ್ಲದೇ, ವನ್ಯಜೀವಿ ಅಪರಾದ ಪ್ರಕರಣಗಳಲ್ಲಿ ಸಂಬಂಧಿಸಿದ ಜುಡಿಷಿಯಲ್ ಮ್ಯಾಜಿಸ್ಟ್ರೇಟ್‌ಗಳ ಅನುಮತಿ ಪಡೆದು ಸಂಬಂಧಿಸಿದ ಅರಣ್ಯ ಅಧಿಕಾರಿಯ ಹಂತದಲ್ಲಿ ತನಿಖೆ ಕೈಗೊಳ್ಳಲಾಗುತ್ತದೆ.

6. ಅರಣ್ಯ ಇಲಾಖೆಯಲ್ಲಿ ಕರ್ನಾಟಕ ನಾಗರಿಕ ಸೇವೆಗಳು ನಿಯಮಾವಳಿಯ ನಿಯಮ 32 ರಡಿ ಖಾಲಿ ಇರುವ ವಲಯ ಅರಣ್ಯಾಧಿಕಾರಿ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ಸ್ವತಂತ್ರ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ ವಿರುದ್ಧ ಲೋಕಾಯುಕ್ತ/ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದಲ್ಲಿ, ಸದರಿ ಸಂಸ್ಥೆಯು ಅರಣ್ಯ ಇಲಾಖೆಗೆ ಈ ಸಂಬಂಧ ಮಾಹಿತಿ ನೀಡಿದ್ದಲ್ಲಿ ಅದರನ್ವಯ ಇಲಾಖೆಯಲ್ಲಿ ಮುಂದಿನ ಕ್ರಮಕೈಗೊಳ್ಳಲಾಗುತ್ತಿದೆ.

7. ಅರಣ್ಯ ಇಲಾಖೆಯಲ್ಲಿ ಸ್ವತಂತ್ರ ಪ್ರಭಾರ ವ್ಯವಸ್ಥೆಯ ಕುರಿತು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವ ಸಂಬಂಧ ಪರಿಶೀಲಿಸಲಾಗುತ್ತಿದೆ.

ತಮ್ಮ ನಂಬುಗೆಯ

Signed by
Brijesh Kumar Dikshit
Date: 22-07-2024 12:30:26

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ), ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.